## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1022 |
| ಸದಸ್ಯರ ಹೆಸರು | : | ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 18.12.2024 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಪುತ್ತೂರು ಕಸಬಾ ಗ್ರಾಮದಲ್ಲಿ ಸಾರ್ವಜನಿಕ ಆಸ್ಪತ್ರೆಗೆ ಜಮೀನು ಕಾಯ್ದಿರಿಸಲಾಗಿದೆಯೇ; ಕಾಯ್ದಿರಿಸಿದಲ್ಲಿ, ಸರ್ವೆ ನಂಬರ್, ಜಮೀನಿನ ವಿಸ್ತೀರ್ಣ, ಮಂಜೂರಾದ ವರ್ಷದ ವಿವರ ನೀಡುವುದು; | ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಪುತ್ತೂರು ಕಸಬಾ ಗ್ರಾಮದಲ್ಲಿ ಸ.ನಂ 131/3ಎ1 ರಲ್ಲಿ 16 ಸೆಂಟ್ಸ್, 131/8 ರಲ್ಲಿ 49 ಸೆಂಟ್ಸ್ ಮತ್ತು ಸ.ನಂ 131/14ಎ1 ರಲ್ಲಿ 80 ಸೆಂಟ್ಸ್ ಸೇರಿದಂತೆ ಒಟ್ಟು 1 ಎಕರೆ ಮತ್ತು 45 ಸೆಂಟ್ಸ್ ಜಮೀನು 2021 ರಲ್ಲಿ ಸಾರ್ವಜನಿಕ ಆಸ್ಪತ್ರೆಗೆ ಕಾಯ್ದಿರಿಸಲಾಗಿರುತ್ತದೆ. |
| (ಆ) | ಕಾಯ್ದಿರಿಸಿದ ಜಮೀನನ್ನು ಇತರೆ ಯಾವುದೇ ಖಾಸಗಿ ಟ್ರಸ್ಟ್ ಅಥವಾ ಸಂಘ ಸಂಸ್ಥೆಗೆ ಮಂಜೂರಾತಿಗೊಳಿಸಲು ಕೋರಿ ಪ್ರಸ್ತಾವನೆ/ಇಲಾಖಾ ಅಭಿಪ್ರಾಯ ಸಲ್ಲಿಕೆಯಾಗಿದೆಯೇ; ಸಲ್ಲಿಕೆಯಾಗಿದ್ದಲ್ಲಿ, ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಕಾಯ್ದಿರಿಸಿದ ಜಮೀನನ್ನು ಖಾಸಗಿ ಟ್ರಸ್ಟ್ ಅಥವಾ ಸಂಘ ಸಂಸ್ಥೆಗೆ ಮಂಜೂರಾತಿಗೊಳಿಸಲು ಕೋರಿ ಪ್ರಸ್ತಾವನೆ ಬಂದಿತ್ತು. ಆದರೆ, ಈಗಾಗಲೇ ಸದರಿ ಜಮೀನನ್ನು ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಿರುವುದರಿಂದ ಖಾಸಗಿ ಟ್ರಸ್ಟ್ ಅಥವಾ ಸಂಘ ಸಂಸ್ಥೆಗೆ ಮಂಜೂರಾತಿಗೊಳಿಸಲು ಅವಕಾಶವಿಲ್ಲವೆಂದು ತಿಳಿಸಿ, ಸಂಬಂಧಿತ ಟ್ರಸ್ಟ್/ಸಂಘ ಸಂಸ್ಥೆಗೆ ಹಿಂಬರಹ ನೀಡಿ, ಪ್ರಕರಣವನ್ನು ಮುಕ್ತಾಯಗೊಳಿಸಿದೆ. |
| (ಇ) | ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಿದ ಜಮೀನನ್ನು ಖಾಸಗಿ ಟ್ರಸ್ಟ್ ಅಥವಾ ಸಂಘ ಸಂಸ್ಥೆಗೆ ಮಂಜೂರಾತಿಗೊಳಿಸಲು ನಿಯಮಾನುಸಾರ ಅವಕಾಸವಿದೆಯೇ; ಇದ್ದಲ್ಲಿ ಸದರಿ ಸಂಸ್ಥೆಗಳಿಗೆ ಇರಬೇಕಾದ ಅರ್ಹತಾ ಮಾನದಂಡಗಳೇನು? (ವಿವರ ನೀಡುವುದು) | ಇರುವುದಿಲ್ಲ. |

(ಕಡತ ಸಂಖ್ಯೆ:ಆರ್‌ಡಿ 113 ಎಲ್‌ಜಿಎ 2024)

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು